ಶ್ರೀ ಎಚ್. ಎಂ. ಚನ್ನಬಸಪ್ಪ.—ತಮಗೆ ಕೊಡಬಲ್ಲೆ. ಆದರೆ ನಭೆಯ ಕಾಲವನ್ನು ತೆಗೆದುಕೊಳ್ಳುತ್ತೇನೆಯೋ ಏನೋ. ಈ ವರ್ಷದ ಬಜೆಟ್ಟಿನೊಳಗೆ!

| | Rs. |
|---|---|
| Bridge across the Arkavathi near Bekuppe ... | 1,50,000 |
| Bridge across the Dakshinapinakini near Channasandra... | 50,000 |
| Total ... | 2,00,000 |

81, capital, ಇದರಲ್ಲಿ

| | Rs. |
|---|---|
| Bridge near Kandapura ... | 13,000 |
| Bridge near Sondekoppa ... | 16,500 |
| Bridge near Ramanagaram across Arkavathi ... | 25,000 |
| Widening the Bridge at 1/15 of Bangalore-Mysore Road. | 15,000 |
| Total ... | 69,500 |

ಶ್ರೀ ಡಿ. ಎಂ. ಗೋವಿಂದರಾಜು.—ಅರ್ಕಾವತಿ ನದಿಗೆ ಸೊಂಡೆಕೊಪ್ಪದ ಹತ್ತಿರ ಸೇತುವೆ ಕಟ್ಟುವುದಕ್ಕೆ ಹಣವನ್ನು ಒದಗಿಸಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಸೇತುವೆಗೆ ಪ್ರೊವೈಡ್ ಮಾಡಿದ್ದೇವೆಂದು ಹೇಳಿದ್ದೇನೆ.

---

## Somayajalapally Extension (Acquisition Proceedings).

*Q.*—513. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) the stage at which the acquisition proceedings relating to the extension of Somayajalapally Village, Srinivasapur Taluk, Kolar District is;

(*b*) if the acquisition has been sanctioned, whether they have thought of disposing of the acquired land at upset price instead of by auction to the poor in the village since they are in a larger number there?

*A.*—Sri T. CHANNIAH (Minister for Public Health and Local Self-Government).—

(*a*) Action has been taken to acquire an extent of 5 acres 27 guntas of land for the village extension and necessary records at the Taluk level are being got up. Proposals for acquisition could not be finalised as the concerned village panchayet has not credited the acquisition charges.

(*b*) Does not arise.

ಶ್ರೀ ಜೆ. ನಾರಾಯಣಪ್ಪ.—ಅಕ್ವಿಜಿಷನ್ ರಿಕಾರ್ಡು ಎಷ್ಟು ದಿವಸಗಳಿಂದ ನಡೆಯುತ್ತಿದೆ, ಸ್ವಾಮಿ?

ಶ್ರೀ ಟಿ. ಚನ್ನಯ್ಯ.— ಎಷ್ಟು ದಿವಸಗಳಿಂದ ನಡೆಯುತ್ತಿದೆ ಎಂಬ ವಿಷಯವನ್ನು ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಜೆ. ನಾರಾಯಣಪ್ಪ.—ಈಗ ತಾಲ್ಲೂಕು ಲೆವಲ್‌ನಲ್ಲಿ ರಿಕಾರ್ಡು ಇದೆ ಎಂದು ಉತ್ತರದಲ್ಲಿ ಕೊಡಲಾಗಿದೆ. ಅದಷ್ಟು ಬೇಗ ಇದನ್ನು ಮುಗಿಸಿ ಡಿಪ್ರೆಸ್ಡ್ ತರಗತಿಯವರಿಗೆ ಮತ್ತು ಬಡವರಿಗೆ ಒಂದು ಎಕರೆ ಜಮೀನನ್ನು ಮೀಸಲಾಗಿಡಲು ವರ್ಷಾಡು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ವಿವರಗಳನ್ನು ತಿಳಿದು ಹೇಳಬೇಕು. ಐದು ಎಕರೆ 27 ಗುಂಟೆ ಜಮೀನನ್ನು ಗ್ರಾಮ ಬಡಾವಣೆಗೆ ಅಕ್ವೈರ್ ಮಾಡಬೇಕೆಂದು ಗ್ರಾಮ ಪಂಚಾಯತಿಯಿಂದ ರಿಕಾರ್ಡು ನಡೆಯುತ್ತಿದೆ. ಅಧಿಕಾರ್ಯಾಚರಿಗೆ ಮನೆ ಇಲ್ಲವೆಂದು ತಿಳಿದುಬಂದ ಪಕ್ಷದಲ್ಲಿ ಅವರಿಗೂಕೂಡ ಜಮೀನನ್ನು ಅಕ್ವೈರ್‌ಮಾಡಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

---

## Bara Hazar Santharpane in Subramanya Temple.

*Q.*—27. Sri B. N. BORANNA GOWDA (Belur).—

Will the Government be pleased to state :—

(*a*) the amount of grant they are annually paying for Bara Hazar Santharpane in Subramanya Temple;

(*b*) the amount of grant that they are paying for the Subramanya Mutt;

(*c*) whether these institutions are one and the same;

(*d*) the terms of the Sannad Sri Krishnaraja Wadeyar III issued to this temple?

*A.*—Sri A. G. RAMACHANDRA RAO (Minister for Law and Education).—

(*a*) Rs. 2,000 (Rupees two thousand) from the State Funds and Rs. 1,150 (Rupees one thousand, one hundred and fifty) from the Chattram Savings Fund.

(*b*) No grant is paid to Sri Subramanya Mutt.

(*c*) Sri Subramanya temple and Sri Subramanya Mutt are separate institutions.

(*d*) The sannad is not available with the Government as the institution is situated outside the State;

ಶ್ರೀ ಬಿ. ಎಕ್. ಬೋರಣ್ಣಗೌಡ.—ಬಾರಾಹಜಾರ್ ಸಂತರ್ಪಣೆಗೆ 2,000 ರೂಪಾಯಿ ಕೊಟ್ಟಿದ್ದೀರಿ. ಈ ಸಂತರ್ಪಣೆ ಬ್ರಾಹ್ಮಣರಿಗೆ ಮಾತ್ರ ನಡೆಸಲ್ಪಡುತ್ತದೆಯೇ ? ಅಥವಾ ಇತರರಿಗೂ ಉಂಟೆ ?

*ಶ್ರೀ ಎ. ಜಿ. ರಾಮಚಂದ್ರರಾವ್. —ಬ್ರಾಹ್ಮಣರಿಗೆ ಮಾತ್ರ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಬ್ರಾಹ್ಮಣರಲ್ಲಿ ಯಾವ ಕೋಮಿಗೆ ಸೇರಿದವರಿಗೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದರಲ್ಲಿ ವ್ಯತ್ಯಾಸವೇನೂ ಕಾಣಲಿಲ್ಲ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಬ್ರಾಹ್ಮಣರಲ್ಲಿ ಇವೊತ್ತಿಗೂ ಇಂಥ ಸಮಯಗಳಲ್ಲಿ ಶಿವಳ್ಳಿ ಬ್ರಾಹ್ಮಣರು, ಮಾರ್ಕರು ಇಂಥವರೊಡನೆ ಸಹಪಂಕ್ತಿ ಭೋಜನವಿಲ್ಲವೆಂದು ಪದೇಪದೇ ಚರ್ಚೆಗೆ ಬಂದು ಆ ಬಗ್ಗೆ ತಮಗೆ ರಿಪೋರ್ಟು ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಾಗೆ ಬಂದರೆ ಏನು ತೀರ್ಮಾನ ಮಾಡೋಣವಾಗುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಮರ್ಶೆಮಾಡುತ್ತೇವೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಬ್ರಾಹ್ಮಣರ ಸಂತರ್ಪಣೆಗೋಸ್ಕರ ಅಲ್ಲಿ ಒಂದು ವ ತಪಿದೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿ ಒಂದು ಮಠವಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈ ಮಠಕ್ಕೂ ದೇವಸ್ಥಾನಕ್ಕೂ ಏನೂ ಸಂಬಂಧವಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಠಕ್ಕೂ ಛತ್ರಕ್ಕೂ ಏನೂ ಸಂಬಂಧವಿಲ್ಲ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಮಠಕ್ಕೆ ಆರು ಸಾವಿರ ಬ್ರಾಹ್ಮಣರ ಸಂತರ್ಪಣೆಗೋಸ್ಕರ ಹಣವನ್ನು ಕೊಟ್ಟಮೇಲೆ ಅದರ ವ್ಯವಸ್ಥೆಯನ್ನು ಯಾರು ನಡೆಸಬೇಕು ಎಂದು ವಿಧಾಯಕವಾಗಿದೆ :

ಶ್ರೀ ಎ. ಜಿ. ರಾಮಚಂದ್ರರಾವ್.—ಮಠಕ್ಕೂ ಛತ್ರಕ್ಕೂ ಸಂಬಂಧವಿಲ್ಲ. ಮಠ ಮತ್ತು ದೇವಸ್ಥಾನ ಎರಡೂ ಇವೆ. ಅದಕ್ಕೆ ಬೇರೆ ಧರ್ಮದರ್ಶಿಗಳಿದ್ದಾರೆ ; ಅವರು ನಡೆಸುತ್ತಾರೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಮಠ, ದೇವಸ್ಥಾನ ಇವುಗಳಿಗೆ ಸಂಬಂಧಪಟ್ಟ ವ್ಯವಸ್ಥೆ ಹೇಗೆ ಮಾಡಬೇಕು ಎಂದು ಮುಜರಾಯಿ ಮ್ಯಾನ್ಯುಯಲ್‌ನಲ್ಲಿ ವಿಧಾಯಕವಾಗಿದೆ. ಈ ಹಣವನ್ನು ದೇವಸ್ಥಾನದವರು ಮ್ಯಾನೇಜ್ ಮಾಡುತ್ತಾರೆಯೇ ಅಥವಾ ಮಠದವರು ಮ್ಯಾನೇಜ್ ಮಾಡುತ್ತಾರೆಯೇ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಠಕ್ಕೆ ಸಂಬಂಧವಿಲ್ಲ. ಛತ್ರಕ್ಕೆ ಧರ್ಮದರ್ಶಿಗಳಿದ್ದಾರೆ, ಅವರು ಮ್ಯಾನೇಜ್ ಮಾಡುತ್ತಾರೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಮಠಕ್ಕೆ ಬ್ರಾಹ್ಮಣರ ಸಂತರ್ಪಣೆಗೋಸ್ಕರ ಕೊಡತಕ್ಕ ಹಣವನ್ನು ದೇವಸ್ಥಾನದವರು ಮ್ಯಾನೇಜ್ ಮಾಡಬೇಕು ಎಂದು ವಿಧಾಯಕವಾಗಿದೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದನ್ನು ಮುಜರಾಯಿ ಮ್ಯಾನ್ಯುಯಲ್‌ನಲ್ಲಿ regulate ಮಾಡಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈ ದೇವಸ್ಥಾನದ ರಥೋತ್ಸವ ಕಾಲದಲ್ಲಿ ಸುಮಾರು ಒಂದು ಲಕ್ಷ ಜನರು ಪ್ರತಿವರ್ಷವೂ ಸೇರುತ್ತಾರೆ. ಆದ್ದರಿಂದ ಬಾರಾ ಹಜಾರ್ ಸಂತರ್ಪಣೆಯಲ್ಲಿ ಎಲ್ಲ ವರ್ಗದ ಜನರಿಗೂ ಅನ್ನಹಾಕುವಂತೆ ನೂಜನೆ ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ವ್ಯವಸ್ಥೆ 1801ನೇ ಇಸವಿಯಿಂದ ನಡೆದುಕೊಂಡು ಬಂದಿದೆ. ಆಗ ಏನೇನು ನಿಯಮಗಳಿದ್ದುವೋ ಅದಕ್ಕನುಗುಣವಾಗಿ ನಡೆದುಕೊಂಡು ಬರುತ್ತಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸರ್ಕಾರಿ ಹಣದ ವಚ್ಚದಿಂದ ಈ ರೀತಿ ಒಂದೇ ಕೋಮಿನವರಿಗೆ ಊಟ ಹಾಕುವುದು ಈಗಿನ ರಾಜ್ಯಾಂಗಕ್ಕೆ ವಿರುದ್ಧವಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಂತರ್ಪಣೆಗೆ ವೆಚ್ಚವಾಗುತ್ತಿರುವ ಹಣ ಸರ್ಕಾರದ ಲೆಕ್ಕವೋ, ಇನ್ ವೆಸ್ಟ್‌ಮೆಂಟ್ ಫಂಡಿನ ಲೆಕ್ಕವೊ ನೋಡಿ ಜವಾಬು ಕೊಡಬೇಕು.

ಶ್ರೀ ಜಿ. ಎ. ತಿಮ್ಮಪ್ಪಗೌಡ.—1801ನೆ ಇಸವಿಯಿಂದ ಈ ವ್ಯವಸ್ಥೆ ನಡೆದುಕೊಂಡು ಬರುತ್ತಿದೆ ಎಂದು ಹೇಳಿದಿರಿ. ಅದು ಆಗಿನ ಕಾಲಧರ್ಮಕ್ಕೆ ಅನುಗುಣವಾಗಿತ್ತು. ಈಗಿನ ಕಾಲಧರ್ಮಕ್ಕೆ ಇಂಥವು ನೂಕ್ತವಲ್ಲವೆಂದು ತಿಳಿದುಕೊಂಡು, ಅಗತ್ಯವಾದ ಬದಲಾವಣೆಗಳನ್ನು ಮಾಡಿ ಸಾರ್ವತ್ರಿಕವಾಗಿ ಎಲ್ಲರಿಗೂ ಅನ್ನ ಹಾಕುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ದಾತ್ಯಗಳ ಇಚ್ಛೆ ಏನಿತ್ತು ಎಂಬುದನ್ನು ನೋಡಿ ಅದರಂತೆ ನಡೆಯಬೇಕಾಗಿದೆ.

Sri K. S. VASAN.—May I know what this *barahazar santharpane* means ?

Sri A. G. RAMACHANDRA RAO.—I have already explained.

Sri K. S. VASAN.—Is it for Brahmins ?

Will the Government examine this matter, Sir ? It is out of time and I request that steps should be taken to stop this.

Mr. SPEAKER.—The answer is already given. The Hon'ble Minister has said that, if that is the intention of the donors, Government will not be in a position to change it. Otherwise, they may consider it.

Sri K. S. VASAN.—It is not my request to feed anybody. I want that nobody should be fed like that.

Sri A. G. RAMACHANDRA RAO.—The intention of the original donors will have to be carried out.

ಶ್ರೀ ಬಿ. ಹುಚ್ಚೇಗೌಡ.—(*a*) ಭಾಗಕ್ಕೆ ಉತ್ತರವಾಗಿ ಸರ್ಕಾರದವರು ಕೊಡತಕ್ಕ ಗ್ಯಾರಂಟ್ ಎಷ್ಟು ಎಂದು ಕೇಳಿದ್ದಕ್ಕೆ ಎರಡು ಸಾವಿರ ರೂಪಾಯಿಗಳನ್ನು ಸ್ಟೇಟ್ ಫಂಡಿನಿಂದ ಕೊಡುತ್ತೇವೆಂದು ಹೇಳಲಾಗಿದೆ. ಈಗ ಸರ್ಕಾರದವರು ವಿಚಾರಿಸುತ್ತೇವೆಂದರೆ ಅದಕ್ಕೆ ಅರ್ಥವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—1-9-1955 ರಲ್ಲಿ ಆಗಿರುವ latest order ಹೇಳುತ್ತೇನೆ. ಅದರಲ್ಲಿ Income and Expenditure Statement ಹೀಗೆ ಕೊಟ್ಟಿದ್ದಾರೆ.

| | | Rs. |
|---|---|---|
| Income from Tasdik grant | ... | 2,000 |
| Chattram Savings Fund | ... | 1,150 |
| Income from investments | ... | 206 |
| Total | ... | 3,356 |

| | Rs. |
|---|---|
| ಇದರಲ್ಲಿ Expenditure sanctioned to feed 12,000 Brahmins in connection with Champa Shasti Car Festival. | 2,300 |
| Cost of 10 maunds sandal wood | 500 |
| Contribution to Sri Subramanya Temple. | 126 |
| Contribution to Muzrai fund ... | 268 |
| Reserve. ... ... | 162 |
| Total ... | 3,356 |

ಇದಿಷ್ಟೂ ಐದು ವರ್ಷ ಕಾಲ ಮುಂಜೂರಾಗಿದೆ.

ಶ್ರೀ ಬಿ. ಹುಚ್ಚೇಗೌಡ.—ತಸ್ದಿಕ್ ಹಣ ಸರ್ಕಾರದವರು ಕೊಡುವ ಗ್ರಾಂಟ್ ಅಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಸರ್ಕಾರದವರು ಕೊಡತಕ್ಕ ಗ್ರಾಂಟು ಎಂದರೆ ಜೈಜರಿಯಿಂದ ಕೊಡುವ ಗ್ರಾಂಟು ಎಂದು ಅರ್ಥವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರಮಾಡಿ ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಬಾರಾಹಜಾರ್ ಎಂದರೆ 12 ಸಾವಿರ ಎಂದರ್ಥ. 12 ಸಾವಿರದ ಜನರಿಗೆ 3,150 ರೂಪಾಯಿಗಳಲ್ಲಿ ಊಟ ಹಾಕುವುದಕ್ಕೆ ಸಾಧ್ಯವೇ?

ಒಂದು ಧ್ವನಿ.—ನಾಲ್ಕಾಣೆಗೊಂದು ಊಟ! (ನಗು).

ಶ್ರೀ ಎ. ಜಿ. ರಾಮಚಂದ್ರರಾವ್.—ಊಟಕ್ಕಾಗಿ 2,300 ರೂಪಾಯಿ ಅಲಾಟ್ ಮಾಡಿದೆ. ಅಷ್ಟರಲ್ಲಿ ಸಾಕು ಮಾಡಿಕೊಳ್ಳಬೇಕು. ಸಾಲದೆ ಇದ್ದರೆ ಧರ್ಮದರ್ಶಿಗಳು private contribution ತೆಗೆದು ಕೊಂಡು ಮಾಡಬೇಕು.

ಶ್ರೀ ಎಸ್. ಗೋಪಾಲಗೌಡ.—ಈಗ ಹನ್ನೆರಡು ಸಾವಿರ ಜನಕ್ಕೂ ಊಟ ಹಾಕುತ್ತಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಕಬೇಕು.

12-30 P.M.

ಶ್ರೀ ಜಿ. ದುಗ್ಗಪ್ಪ.—ನಂಸ್ಥಾನದ ಫಂಡಿನಿಂದ 2,000 ರೂಪಾಯಿಗಳನ್ನು ಕೊಡಲಾಗುತ್ತಿದೆಯೆಂದು (a) ಪ್ರಶ್ನೆ ಉತ್ತರದಲ್ಲಿ ಹೇಳಿದೆ. ಅದು ಇಂಪೆನ್ಸ್ಮೆಂಟ್ ಫಂಡೆ ಅಥವಾ ಸರ್ಕಾರಿ ಫಂಡೆ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ಯಾರು ಯಾವ ಕಾಲದಲ್ಲಿ ಇದರ ಏರ್ಪಾಡು ಮಾಡಿದರೆಂಬುದನ್ನು ಹೇಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸಿ ಹೇಳುತ್ತೇನೆ.

Sri G. SIVAPPA.—May I know whether Government will stop it if it is Government money?

Sri A. G. RAMACHANDRA RAO.—I cannot answer hypothetical questions. I have answered that I will get the facts and place them before the House.

---

## Kabbinada Kolu Swamy Mutt, Panagalli Village.

*Q.*—533. Sri H. K. SIVARUDRAPPA (Gundlupet-Heggadadevanakote).—

Will the Government be pleased to state:—

(*a*) whether it is a fact that the inam grant to Kabbinada Kolu Swamy Mutt at Panagalli village in Gundlupet Taluk has been cancelled and resumed to the Government; if so, the reason therefor;

(*b*) whether it has come to their notice that the devotees belonging to that Mutt in the said village have recently built a new Mutt at a cost of Rs. 15,000;

(*c*) whether any application has been received by them requesting to restore to the Mutt in its name the inam lands that were in its possession since a Swamiji has to be installed to that Mutt; if so, when;

(*d*) the decision taken by them on the said application?

*A.*—Sri A. G. RAMACHANDRA RAO (Minister for Law and Education).—

(*a*) Yes; the institution was ordered to be declared as defunct as neither the Mutt nor the appointment of the previous head of the Mutt was recognised by the Government previously. The inam lands were also ordered to be resumed to Government.

(*b*) No.

(*c*) No.

(*d*) Does not arise in view of replies to (*b*) and (*c*).